ಶ್ರೀ ಎ. ಕೃಷ್ಣಪ್ಪ: ಸರ್ಕಾರಕ್ಕೆ ಅದನ್ನು ಮುಚ್ಚಿಹಾಕಬೇಕೆನ್ನುವ ಇಚ್ಛೆಯಿಲ್ಲ ಅದನ್ನು ಬಿಚ್ಚಿ ಇಡುತ್ತೇವೆ, ಇದರ ಬಗ್ಗೆ ಸರ್ಕಾರಕ್ಕೇನೂ ಭಯವಿಲ್ಲ, ಮುಚ್ಚಿ ಹಾಕಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಸಿ. ಭೈರೇಗೌಡ: 2-3 ದಿವಸದೊಳಗೆ ಆ ವರದಿ ಕಳುಹಿಸಿ ಕೊಡಿ.

ಅಧ್ಯಕ್ಷರು: ತಾವು ಪ್ರಸ್ತಾಪಿಸಿದ್ದೀರಿ ಸರ್ಕಾರದವರು ಉತ್ತರ ಕಳುಹಿಸುತ್ತಾರೆ ಬಿಡಿ.

ಅಧ್ಯಕ್ಷರು: ಈಗ ಒಂದು ಪ್ರಕಟಣೆ

13. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೆಯ ವಿಧಾನ ಸಭೆಯ ಮೂರನೇ ಅಧಿವೇಶನವು ದಿನಾಂಕ 26ನೇ ಫೆಬ್ರವರಿ 2001 ರಂದು ಜಂಟಿ ಅಧಿವೇಶನದೊಂದಿಗೆ ಸಮಾವೇಶಗೊಂಡಿತು. ಸದರಿ ಅಧಿವೇಶನದಲ್ಲಿ 21 ದಿನಗಳು ಅಧಿವೇಶನವನ್ನು ನಡೆಸಿ, ಒಟ್ಟು 101 ಗಂಟೆಗಳ ಕಾಲ ಸರ್ಕಾರಿ ಮತ್ತು ಖಾಸಗಿ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಅಧಿವೇಶನದ ಪ್ರಾರಂಭದ ದಿನದಂದು ಅಂದರೆ ದಿನಾಂಕ 26ನೇ ಫೆಬ್ರವರಿ 2001 ರಂದು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ತದನಂತರ, ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 12.00 ಗಂಟೆಗಳ ಕಾಲ ನಡೆದಿದ್ದು, ಒಟ್ಟು 12 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಸದಾವಕಾಶ ಕಲ್ಪಿಸಲಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು 23ನೇ ಮಾರ್ಚ್, 2001 ರಂದು ಚರ್ಚೆಗೆ ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ.

ಅಧಿವೇಶನದ ಎರಡನೆಯ ದಿನದಂದು, ಗುಜರಾತ್ ರಾಜ್ಯದಲ್ಲಿ ಜನವರಿ 26 ರಂದು ಸಂಭವಿಸಿದ ಭೂಕಂಪದಲ್ಲಿ ಅಸಂಖ್ಯಾತ ಜನರು ನಿಧನರಾದ ಬಗ್ಗೆ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್, ಮಾಜಿ ಸಚಿವರಾದ ಡಾ।। ಚೀವರಾಜ್ ಆಳ್ವ ಹಾಗೂ ವಿಧಾನಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಲಕ್ಷ್ಮೀನರಸಿಂಹಯ್ಯ ಮತ್ತು ಇತರರ ಗೌರವಾರ್ಥ ಸಂತಾಪ ನಿರ್ಣಯಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳು 2001-2002ನೇ ಸಾಲಿನ ಆಯವ್ಯಯವನ್ನು ದಿನಾಂಕ 26-3-2001 ರಂದು ಮಂಡಿಸಿದರು. ಆಯವ್ಯಯದ ಮೇಲಿನ ಚರ್ಚೆಯಲ್ಲಿ 24 ಜನ ಸದಸ್ಯರು ಭಾಗವಹಿಸಿದ್ದು, ಸುದೀರ್ಘ ಚರ್ಚೆಯ ನಂತರ, 30ನೇ ಮಾರ್ಚ್, 2001 ರಂದು, ಮುಖ್ಯಮಂತ್ರಿಗಳ ಉತ್ತರದೊಂದಿಗೆ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯನ್ನು ಮುಕ್ತಾಯಗೊಳಿಸಿ, ಪ್ರಸ್ತಾವನೆಯು ಅಂಗೀಕರಿಸಲ್ಪಟ್ಟು, ಜುಲೈ 31ನೇ ದಿನಾಂಕದವರೆಗೆ ಲೇಖಾನುದಾನ ಪಡೆಯಲಾಗಿರುತ್ತದೆ. ಅಲ್ಲದೆ ದಿನಾಂಕ 29ನೇ ಮಾರ್ಚ್, 2001 ರಂದು, 2000-2001ನೇ ಸಾಲಿನ ಪೂರಕ ಅಂದಾಜುಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ 30-3-2001ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಈ ಅವಧಿಯಲ್ಲಿ, ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳಿಗೆ ತಿದ್ದುಪಡಿ ತಂದು, ಇಲಾಖೆಗಳಿಗೆ ಸಂಬಂಧಪಟ್ಟ ಹದಿನೈದು ವಿಷಯ ಸಮಿತಿಗಳನ್ನು ಪುನರ್ ರಚಿಸಿ, ಸದಸ್ಯರುಗಳಿಗೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಲಾಗಿದೆ.

ನಿಯಮ 60ರ ಮೇರೆಗೆ, 4 ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಎರಡು ಸೂಚನೆಗಳಿಗೆ, ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ, 2 ಸೂಚನೆಗಳನ್ನು ನಿಯಮ 69 ರಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಲಾಯಿತು. ಸದರಿ ಅವಧಿಯಲ್ಲಿ, ನಿಯಮ 69ರ ಮೇರೆಗೆ ರಾಜ್ಯದಲ್ಲಿ ಪಾಣಿಜ್ಯ ಬೆಳೆಗಳೂ ಸೇರಿದಂತೆ ಎಲ್ಲಾ ವ್ಯವಸಾಯೋತ್ಪನ್ನಗಳ ಬೆಲೆ ಕುಸಿತದಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ ಮತ್ತು ವಿದ್ಯುತ್ ದರ ಏರಿಕೆಯಿಂದ ರೈತರಿಗೆ ಹಾಗೂ ಇತರರಿಗೆ ಆಗಿರುವ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ.

ಮೂರನೆಯ ಅಧಿವೇಶನದ ಅವಧಿಯಲ್ಲಿ ಒಟ್ಟು 1767 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಿದ್ದು, 165 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 163 ಪ್ರಶ್ನೆಗಳಿಗೆ ಹಾಗೂ 1476 ಚುಕ್ಕೆ ರಹಿತ ಪ್ರಶ್ನೆಗಳ ಪೈಕಿ 1294 ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲಾಗಿದೆ. 98 ಪ್ರಶ್ನೆಗಳಿಗೆ ಸರ್ಕಾರದಿಂದ ವರದಿ ತರಿಸಲು ಕ್ರಮ ಕೈಗೊಂಡಿದ್ದು, 28 ಪ್ರಶ್ನೆಗಳನ್ನು ತಿರಸ್ಕರಿಸಲಾಗಿದೆ. ಸದರಿ ಅವಧಿಯಲ್ಲಿ 129 ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು, 9 ವರದಿಗಳನ್ನು ಮತ್ತು 12 ಅಜೆಂಡಾಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ಸದರಿ ಅವಧಿಯಲ್ಲಿ 23 ಗಮನ ಸೆಳೆಯುವ ಸೂಚನೆಗಳು ಚರ್ಚೆಯಾಗಿರುತ್ತವೆ. ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಒಂದು ಸೂಚನೆಗೆ ಅವಕಾಶ ಕಲ್ಪಿಸಲಾಗಿದೆ. ಶೂನ್ಯ ವೇಳೆಯಲ್ಲಿ 58 ವಿಷಯಗಳನ್ನು ಚರ್ಚಿಸಲಾಗಿದೆ.

ಸದರಿ ಅವಧಿಯಲ್ಲಿ 3 ಹಣ್ಣುಚ್ಚುತಿ ಸೂಚನೆಗಳನ್ನು ಸ್ವೀಕರಿಸಿದ್ದು, ವರದಿಗಳನ್ನು ಪಟಲಯಿಂ ತಿಳಿಸಲಾಗಿದೆ. ವಿಧಾನಸಭೆಯ 12+ ವಿಧೇಯಕಗಳನ್ನು ಪರ್ಯಾಲೋಚಿಸಿ, ಅಂಗೀಕರಿಸಲಾಗಿದೆ,

ಈ ಅವಧಿಯಲ್ಲಿ ವಿಧಾನ ಸಭೆಯ 11 ಸಮಿತಿಗಳಿಗೆ 2001-2002ರ ಸಾಲಿಗೆ ಸದಸ್ಯರನ್ನು ಚುನಾಯಿಸಲು ಸೂಚಿಸಲಾಗಿದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದ ಮಾಧ್ಯಮಗಳಿಗೆ, ಅಂತರ್‌ಜಾಲದಲ್ಲಿ ಬರಲು ಸಹಕರಿಸಿದ ಮಾಧ್ಯಮಗಳಿಗೆ, ವಿವಿಧ ಇಲಾಖಾ ಅಧಿಕಾರಿಗಳಿಗೂ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಎಂಟು ಗಂಟೆ ಐದು ನಿಮಿಷಕ್ಕೆ ಮುಕ್ತಾಯಗೊಂಡಿತು).

+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು, ತುಮಕೂರು, ಕಾರ್ಯ. 153 - 350 ಪುಸ್ತಕಗಳು ದಿ: 28-10-2002